# ಅಪರಾಧ ತನಿಖಾ ಇಲಾಖೆ

## ಪತ್ರಿಕಾ ಪ್ರಕಟಣೆ

ಉಡುಪಿ ತಾಲ್ಲೂಕು ವಿಧಾನಸಭಾ ಕ್ಷೇತ್ರದ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ. ರಘುಪತಿ ಭಟ್ ರವರು ದಿನಾಂಕ: 11.06.2008 ರಂದು ತಮ್ಮ ಪತ್ನಿಯವರಾದ ಶ್ರೀಮತಿ ಪದ್ಮಪ್ರಿಯ ರವರು ತಮ್ಮ ತವರು ಮನೆಗೆ ಹೋಗಿ ಬರುವುದಾಗಿ ತಿಳಿಸಿ ಕಾರ್ ನೋಂ. ಸಂಖ್ಯೆ: ಕೆ.ಎ.20.ಎಂ.9743 ರಲ್ಲಿ ಪ್ರಯಾಣ ಬೆಳೆಸಿರುತ್ತಾರೆ. ಅದೇ ದಿನ ಬೆಂಗಳೂರಿನಲ್ಲಿ ಸಭೆಯಿದ್ದ ಕಾರಣದಿಂದಾಗಿ ದೂರುದಾರರೂ ಸಹ ಬೆಂಗಳೂರಿಗೆ ಪ್ರಯಾಣ ಬೆಳಿಸಿರುತ್ತಾರೆ. ಈ ನಡುವೆ ದೂರುದಾರರ ಪತ್ನಿಯವರು ಕಾಣೆಯಾಗಿರುವ ಬಗ್ಗೆ ಮಾಹಿತಿ ದೊರೆತಿದ್ದು, ಅವರ ತವರು ಮನೆಗೆ ವಿಚಾರ ಮಾಡಲಾಗಿ ತವರುಮನೆಗೆ ತಲುಪಿರುವುದಿಲ್ಲವೆಂಬ ಮಾಹಿತಿ ಲಭ್ಯವಾಗಿರುತ್ತದೆ ಹಾಗೂ ಅವರು ಪ್ರಯಾಣಿಸಿದ ಕಾರ್ ಉಡುಪಿಯ ಕುಂಜಾರಗಿರಿಯಲ್ಲಿ ಲಭ್ಯವಾಗಿರುತ್ತದೆ. ಆನಂತರ ಇವರ ಪತ್ನಿಯವರು ದೆಹಲಿಯಲ್ಲಿರುವ ಮಾಹಿತಿಯು ಲಭ್ಯವಾಗಿರುತ್ತದೆ. ನಂತರ ನವದೆಹಲಿಗೆ ತೆರಳಿ ಹುಡುಕಾಟ ನಡೆಸಿದಾಗ ದ್ವರಕಾ ಪೊಲೀಸ್ ಠಾಣೆ ವ್ಯಾಪ್ತಿಯ ಶರ್ಮ ಅಪಾರ್ಟ್‌ಮೆಂಟ್‌ನ ಒಂದು ಕೊಠಡಿಯೊಳಗಡೆ ಪತ್ನಿಯು ನೇಣು ಬಿಗಿದ ಸ್ಥಿತಿಯಲ್ಲಿ ಶವವು ದೊರೆತಿರುತ್ತದೆ.

ಈ ಸಂಬಂಧ ದಿನಾಂಕ: 22.06.2008 ರಂದು ಮಣಿಪಾಲ್ ಪೊಲೀಸ್ ಠಾಣೆ ಮೊ.ಸಂ. 109/2008, ಕಲಂ. 365, 306 ಐ.ಪಿ.ಸಿ ರೀತ್ಯ ಪ್ರಕರಣವನ್ನು ದಾಖಲಿಸಿ ತನಿಖೆಯನ್ನು ಕೈಗೊಳ್ಳಲಾಗಿತ್ತು. ಆನಂತರ ಈ ಪ್ರಕರಣದ ವಿಸ್ತೃತ ತನಿಖೆಗಾಗಿ ಪ್ರಕರಣವನ್ನು ಸಿ.ಐ.ಡಿ ಘಟಕಕ್ಕೆ ವಹಿಸಿರುತ್ತದೆ. ಈ ಪ್ರಕರಣದ ತನಿಖಾಧಿಕಾರಿಗಳು ತಮ್ಮ ಹಿರಿಯ ಅಧಿಕಾರಿಗಳ ತನಿಖಾ ಮಾರ್ಗದರ್ಶನದೊಂದಿಗೆ ಮಹತ್ವದ ಪುರಾವೆಗಳನ್ನು ಸಂಗ್ರಹಿಸಿ, ಪ್ರಕರಣದ ತನಿಖೆಯನ್ನು ಅತ್ಯಂತ ನಿಖರವಾಗಿ ನಡೆಸಿದಾಗ ಶ್ರೀ. ಅತುಲ್‌ರಾವ್ ಎಂಬ ಆರೋಪಿತರ ಪಿತೂರಿ ಹಾಗೂ ಕೃತ್ಯಗಳು ಅಡಗಿದ್ದ ಕಾರಣದಿಂದಾಗಿ ಈ ಆರೋಪಿಯ ವಿರುದ್ಧ ಕಲಂ. 417, 465, 468, 471 ಐ.ಪಿ.ಸಿ ರೀತ್ಯ ಆರೋಪಪಟ್ಟಿಯನ್ನು ಸಲ್ಲಿಸಲಾಗಿತ್ತು.

ಈ ಪ್ರಕರಣದ ವಿಚಾರಣೆ ನಡೆಸಿದ ಘನ ನ್ಯಾಯಾಲಯವು ಶ್ರೀ. ಅತುಲ್‌ರಾವ್ ರವರ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಅವರನ್ನು ಅಪರಾಧಿಯೆಂದು ಘೋಷಿಸಿ ಅವರಿಗೆ 6 ತಿಂಗಳ ಜೈಲು ಶಿಕ್ಷೆಯನ್ನು ವಿಧಿಸಿ, ರೂ.5000/- ಗಳ ದಂಡವನ್ನು ವಿಧಿಸಿರುತ್ತದೆ.